**ಪಿ.ಡಬ್ಲ್ಯೂ-2**

**ದಿನಾಂಕಃ04-04-2016 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರರು 2 ಮತ್ತು 7 ರವರ ಪರವಾಗಿ ಶ್ರೀಮತಿ ಎಸ್.ವಿ.ಎಸ್. ವಕೀಲರಿಂದಃ-**

2 ನೇ ಎದುರುದಾರರು ನನ್ನ ತಂಗಿ ಎಂದರೆ ಸರಿ. ಈ ಅರ್ಜಿಯಲ್ಲಿ ಯಾವ ಯಾವ ವಿಚಾರಗಳ ಸಂಬಂಧ ಪರಿಹಾರ ಕೇಳಲಾಗಿರುತ್ತದೆಂಬುದರ ಬಗ್ಗೆ ಗೊತ್ತು. ಕಾಶೀ ವಿಶ್ವನಾಥಶೆಟ್ಟರವರು ಬದುಕಿದ್ದಾಗ ಮತ್ತು ಮೃತಪಟ್ಟ ನಂತರ ಅವರ ಕುಟುಂಬದಲ್ಲಿ ಆದ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಈ ಕೇಸಿನ ವ್ಯವಹಾರದ ಬಗ್ಗೆ ಗೊತ್ತು. ಓ.ಎಸ್.25/94 ರಲ್ಲಿ ನಾನು ಪಕ್ಷಗಾರನಲ್ಲ. ಸದರಿ ಕೇಸಿನ ಬಗ್ಗೆ ನನಗೆ ಗೊತ್ತಿಲ್ಲ. ಈ ಅರ್ಜಿ ವಜಾ ಆಗಿರುತ್ತದೆಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ.

ಮಂಜುನಾಥರವರ ಹೆಸರಿಗೆ ಆಸ್ತಿಗಳು ಕ್ರಯ ಆಗಿದ್ದು ಸದರಿ ಕ್ರಯಪತ್ರಗಳ ಆಧಾರದ ಮೇರೆಗೆ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿಃ21-12-1999 ರಲ್ಲಿ ಆದ ಕ್ರಯಪತ್ರದಲ್ಲಿ ಸರ್ವೆ ನಂಃ288/1ಸಿ ರಲ್ಲಿ 36 ಗುಂಟೆ, ಸರ್ವೆ ನಂಃ 288/2 ರಲ್ಲಿ 1 ಎಕರೆ ಮತ್ತು 1 ಎಕರೆ 15 ಗುಂಟೆ ಕ್ರಯ ಆಗಿರುತ್ತದೆ. ಸದರಿ ಆಸ್ತಿಗಳು ಕಾಶೀ ವಿಶ್ವನಾಥ ಶೆಟ್ಟರಿಗೆ ಅವರ ತಾಯಿಯಿಂದ ಬಂದ ಆಸ್ತಿಗಳಾಗಿರುತ್ತವೆ. ಸದರಿ ಕಾಶೀ ವಿಶ್ವನಾಥ ಶೆಟ್ಟರು ಬದುಕಿದ್ದ ಸಮಯದಲ್ಲಿ ಆಸ್ತಿಗಳನ್ನು ನೊಂದಣಿ ವಿಭಾಗದ ಪ್ರಕಾರ ಮಾಡಿಕೊಂಡಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಅರ್ಜಿದಾರರು ನಾಗರತ್ನಮ್ಮನವರಿಂದ ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ. ಕ್ರಯ ಆಗುವ ಸಮಯದಲ್ಲಿ 1 ನೇ ಎದುರುದಾರರ ಕುಟುಂಬದಲ್ಲಿ ಯಾವ ಯಾವ ವ್ಯವಹಾರಗಳು ಇದ್ದವು ಎಂದು ಗೊತ್ತಿಲ್ಲ. ಸದರಿ ಕಾಶೀ ವಿಶ್ವನಾಥ ಶೆಟ್ಟರಿಗೆ 9 ಜನ ಮಕ್ಕಳಿದ್ದು 3 ಜನ ಹೆಣ್ಣು ಮಕ್ಕಳು, 5 ಜನ ಗಂಡು ಮಕ್ಕಳಿರುತ್ತಾರೆ. ನಾನು ಮೇಲೆ ಹೇಳಿದ 2 ಕ್ರಯಪತ್ರಗಳನ್ನು ನಾನು ನೋಡಿರುತ್ತೇನೆ.

ಸದರಿ ಕ್ರಯಪತ್ರಗಳು ಕೈಬರವಣಿಗೆಯಲ್ಲಿ ಇದೆಯೋ ಅಥವಾ ಬೆರಳಚ್ಚು ಮಾಡಲಾಗಿದೆಯೋ ಅಥವಾ ಕಂಪ್ಯೂಟರ್ ಪ್ರಿಂಟ್ (ಡಿ.ಟಿ.ಪಿ.) ಆಗಿದೆಯೋ ಎಂದು ಹೇಳಲಾಗುವುದಿಲ್ಲ, ಆದರೆ 1 ಪತ್ರ ಕೈಯಲ್ಲಿ ಬರೆಯಲಾಗಿರುತ್ತದೆ.

ದಿಃ22-11-1999 ರ ಕ್ರಯಪತ್ರಕ್ಕೆ ಶಶಿಕುಮಾರ, ಶಿವಕುಮಾರ, ರಮೇಶ್, ಪ್ರಕಾಶ್‌ರವರು ಸಹಿಗಳನ್ನು ಮಾಡಿರುತ್ತಾರೆ. ದಿಃ21-12-1999 ರ ಕ್ರಯಪತ್ರಕ್ಕೆ 9 ಜನ ಮಕ್ಕಳೂ ಸಹ ಸಹಿ ಮಾಡಿರುತ್ತಾರೆ. ಸದರಿ ಪತ್ರಗಳು ದಾನಪತ್ರಗಳಾಗಿರುತ್ತವೆ. ಶಿವಕುಮಾರ್ ಎನ್ನುವವರು ಸಾಲ ಮಾಡಿದ್ದು ಸದರಿ ಸಾಲವನ್ನು ತೀರುವಳಿ ಮಾಡಲು ಆಗದ ಕಾರಣ ಒಟ್ಟು ಕುಟುಂಬದ ಸದಸ್ಯರೆಲ್ಲರೂ ತೀರ್ಮಾನ ಮಾಡಿ ಸಾಲ ತೀರುವಳಿ ಮಾಡುವವರ ಹೆಸರಿಗೆ ಆಸ್ತಿ ದಾನ ಮಾಡಲು ಒಪ್ಪಿರುತ್ತಾರೆ. ಸದರಿ ಸಾಲವನ್ನು ಅರ್ಜಿದಾರರು ತೀರುವಳಿ ಮಾಡಿರುತ್ತಾರೆ ಹಾಗಾಗಿ ಅವರ ಹೆಸರಿಗೆ ದಾನ ಪತ್ರ ಆಗಿರುತ್ತದೆ. ಸದರಿ ದಾನಪತ್ರಗಳನ್ನು ಬರೆದುಕೊಡುವ ಸಮಯದಲ್ಲಿ ಓ.ಎಸ್.25/94 ನ್ಯಾಯಾಲಯದಲ್ಲಿ ಜಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ಹೇಳಿರುತ್ತಾರೆ. ಸದರಿ ದಾವೆಯಲ್ಲಿ 1 ನೇ ಎದುರುದಾರರು ಆಸ್ತಿಗಳನ್ನು ವಿಲೇವಾರಿ ಮಾಡಲು ನ್ಯಾಯಾಲಯದ ಅನುಮತಿ ಕೋರಿದ್ದರು. ಸದರಿ ಅರ್ಜಿ ವಜಾ ಆಗಿರುತ್ತದೆಂದರೆ ಸರಿಯಲ್ಲ, 1 ನೇ ಎದುರುದಾರರು ಆಸ್ತಿಗಳನ್ನು ವಿಲೇವಾರಿ ಮಾಡಿದ ಕಾರಣ ಸದರಿ ದಾಖಲೆಗಳನ್ನು ಪರಿಶೀಲಿಸಿ ದಾವೆಯಲ್ಲಿ ಆದೇಶ ಮಾಡಬೇಕೆಂದು ಕೋರಿದ್ದರು ಮತ್ತು ಸದರಿ ಅರ್ಜಿ ವಜಾ ಆದ ಬಗ್ಗೆ ಗೊತ್ತಿಲ್ಲ, 1 ನೇ ಎದುರುದಾರರು ಸದರಿ ಆದೇಶಗಳ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು ಅದು ವಜಾ ಆಗಿರುವ ವಿಚಾರ ನನಗೆ ಗೊತ್ತಿಲ್ಲ, 1 ನೇ ಎದುರುದಾರರು ಸದರಿ ದಾನ ಪತ್ರಗಳು ದೋಷಪೂರಿತ ದಾಖಲೆಗಳಾದ ಕಾರಣ ಅವುಗಳನ್ನು ರದ್ದು ಮಾಡಲು ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ,

ಮೇಲೆ ಹೇಳಿದ ಆಸ್ತಿಗಳು ಕಾಶೀ ವಿಶ್ವನಾಥ ಶೆಟ್ಟರಿಗೆ ವಿಭಾಗದಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ, 1 ನೇ ಎದುರುದಾರರು ಸರ್ವೆ ನಂಃ288/1ಸಿ ಆಸ್ತಿ

ತನ್ನ ಗಂಡ ಸದರಿ ಕಾಶೀ ವಿಶ್ವನಾಥ ಶೆಟ್ಟರಿಗೆ ವಿಭಾಗದಲ್ಲಿ ಬಂದಿರುವುದಿಲ್ಲ ಎಂದು ಮೂಲ ದಾವಾ ನಂಃ25/1994 ರಲ್ಲಿ ಸಾಕ್ಷಿ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ಅರ್ಜಿಯನ್ನು ಓ.ಎಸ್.25/1994 ರ ಡಿಕ್ರಿ ಪ್ರಕಾರ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಎದುರುದಾರರು ಎಲ್ಲಿ, ಯಾರ ಬಳಿ ಮತ್ತು ಎಷ್ಟು ಸಾಲ ಮಾಡಿದ್ದರು ಎಂದು ಗೊತ್ತಿಲ್ಲ. ಸಾಲ ನೀಡಿದವರು 2 ನೇ ಎದುರುದಾರರನ್ನು ಸಾಲದ ಹಣ ವಾಪಸ್ಸು ಮಾಡುವಂತೆ ಒತ್ತಾಯ ಮಾಡುತ್ತಿದ್ದ ವಿಚಾರ ಗೊತ್ತು. ಸದರಿಯವರ ಹೆಸರು ಗೊತ್ತಿಲ್ಲ. ಅರ್ಜಿದಾರರು 45 ಲಕ್ಷ ರೂ.ಗಳನ್ನು ಸಾಲ ನೀಡಿದವರಿಗೆ ನಗದು ರೂಪದಲ್ಲಿ ವಾಪಸ್ಸು ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಖುದ್ದು ಹಾಜರಿರಲಿಲ್ಲ. 2 ನೇ ಎದುರುದಾರರು 45 ಲಕ್ಷ ರೂ.ಗಳನ್ನು ಯಾರ ಬಳಿಯೂ ಸಹ ಸಾಲ ಮಾಡಿರುವುದಿಲ್ಲ ಮತ್ತು ಅದನ್ನು ತೀರುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಎದುರುದಾರರು ಮಾತ್ರ 45 ಲಕ್ಷ ರೂ.ಗಳನ್ನು ಸಾಲ ಪಡೆದಿದ್ದು ಅದನ್ನು ತೀರುವಳಿ ಮಾಡಲು ಕುಟುಂಬದ ಎಲ್ಲಾ ಸದಸ್ಯರು ಯಾವ ಕಾರಣಕ್ಕಾಗಿ ಒಪ್ಪಿದ್ದರು ಎಂದರೆ ಗೊತ್ತಿಲ್ಲ. ಅರ್ಜಿದಾರರು ಸುಮಾರು 32 ವರ್ಷಗಳಿಂದ ಅಮೇರಿಕಾದಲ್ಲಿ ವಾಸವಿದ್ದಾರೆಂದರೆ ಸರಿ. ಕಾಶೀ ವಿಶ್ವನಾಥ ಶೆಟ್ಟರು ಬದುಕಿದ್ದಾಗ 2 ನೇ ಎದುರುದಾರರ ಜೊತೆ ವಾಸವಿದ್ದರು ಎಂದರೆ ಸರಿ. ಕಾಶೀ ವಿಶ್ವನಾಥ ಶೆಟ್ಟರು ಮರಣ ಹೊಂದಿದ ನಂತರ 1 ನೇ ಎದುರುದಾರರು 2 ನೇ ಎದುರುದಾರರ ಜೊತೆ ಮಾರ್ಚ್-2011 ರವರೆಗೆ ವಾಸವಿದ್ದರು ಎಂದರೆ ಸರಿ. ಸದರಿಯವರನ್ನು ನೋಡಿಕೊಳ್ಳಲು ಅರ್ಜಿದಾರರು 2 ನೇ ಎದುರುದಾರರಿಗೆ ವಹಿಸಿದ್ದರು ಎಂದು ಹೇಳಿರುತ್ತಾರೆ. ಆ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅರ್ಜಿದಾರರು ಆಸ್ತಿಗಳನ್ನು ನೋಡಿಕೊಳ್ಳಲು 2 ನೇ ಎದುರುದಾರರಿಗೆ ವಹಿಸಿರಲಿಲ್ಲ ಎಂದರೆ ಸರಿಯಲ್ಲ.

ಓ.ಎಸ್.93/2008 ಅರ್ಜಿದಾರರು 1, 2 ಮತ್ತು 7 ಎದುರುದಾರರ ವಿರುದ್ಧ ದಾವೆ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ದಾವೆಯಲ್ಲಿ ಅರ್ಜಿದಾರರ ಪರವಾಗಿ ಸಾಕ್ಷಿ

ನುಡಿದಿರುತ್ತೇನೆಂದರೆ ಸರಿ. ಸಾಲದ ವಿಚಾರ ಮೂಲ ದಾವಾ ನಂಃ 5/06 ರಲ್ಲಿ ತೀರ್ಮಾನಗೊಂಡಿರುತ್ತದೆಂದರೆ ಸರಿಯಲ್ಲ.

6 ನೇ ಎದುರುದಾರರಾದ ವಿಜಯಲಕ್ಷ್ಮೀ ಯವರು ಹಿಸ್ಸೆಗಾಗಿ ಮೂಲ ದಾವಾ ನಂಃ 40/05 ರ ಪ್ರಕಾರ ತನ್ನ ಸಹೋದರರ ವಿರುದ್ಧ ದಾವೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ನನಗೆ ಸದರಿ ಕೇಸಿನ ಬಗ್ಗೆ ಗೊತ್ತಿಲ್ಲದ ಕಾರಣ 2 ನೇ ಎದುರುದಾರರು 12 ಲಕ್ಷ ಹಣ ನೀಡಿ ರಾಜಿ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. 12 ಲಕ್ಷ ರೂ.ಗಳನ್ನು 2 ನೇ ಎದುರುದಾರರು ಅರ್ಜಿದಾರರ ಮಂಜುನಾಥರವರ ಹೆಸರಿಗೆ ಡಿ.ಡಿ. ಮೂಲಕ ಕಳುಹಿಸಿದ ವಿಚಾರ ನನಗೆ ಗೊತ್ತಿಲ್ಲ.

ಅರ್ಜಿದಾರರ ಪರವಾಗಿ ಮೊದಲು ಪ್ರಕರಣ ನಡೆಸುತ್ತಿದ್ದರು. ಅವರು ಮರಣ ಹೊಂದಿ 3 ವರ್ಷಗಳಾಗಿರುತ್ತವೆ. ದಿಃ07-01-2012 ರಂದು ನಾನು ಪ್ರಕಾಶ್‌ರವರ ವಾರಸುದಾರರನ್ನು ಕೇಸಿನಲ್ಲಿ ಸೇರ್ಪಡೆ ಮಾಡಲು ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತೇನೆ. ದಾನ ಪತ್ರಗಳಲ್ಲಿ ಅರ್ಜಿದಾರರು 45 ಲಕ್ಷ ಸಾಲ ತೀರುವಳಿ ಮಾಡಿದ ಕಾರಣ ಕುಟುಂಬದ ಸದಸ್ಯರೆಲ್ಲಾ ಒಪ್ಪಿ ಆಸ್ತಿಯನ್ನು ದಾನ ಮಾಡುತ್ತಿರುವಾಗಿ ಒಕ್ಕಣೆಯನ್ನು ಬರೆದಿರುವುದಿಲ್ಲ. 6ನೇ ಎದುರುದಾರರು ಯಾವ ಕಾರಣಕ್ಕಾಗಿ ಕೇಸು ದಾಖಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು 2 ದಾನಪತ್ರಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ಕಾಶೀ ವಿಶ್ವನಾಥ ಶೆಟ್ಟಿಯವರ ಮಕ್ಕಳು ಆಸ್ತಿಯನ್ನು ದಾನ ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. 3 ನೇ ಎದುರುದಾರರು ದಾನ ಪತ್ರ ಆಗಿರುವುದಿಲ್ಲ ಎಂದು ಹೇಳಿಕೆ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. 3 ನೇ ಎದುರುದಾರರು ದಿಃ05-08-1982 ರಲ್ಲಿ ಹಕ್ಕು ಕುಲಾಸೆ ಪತ್ರ ಬರೆದುಕೊಟ್ಟ ವಿಚಾರ ನನಗೆ ಗೊತ್ತು. ಸಾಲಕ್ಕೆ ಸಂಬಂಧಪಟ್ಟ ದಾಖಲೆಗಳು ನ್ಯಾಯಾಲಯದಲ್ಲಿ ಲಭ್ಯವಿರುವುದಿಲ್ಲವೆಂದು ಹಿಂಬರಹ ನೀಡಿದ ವಿಚಾರ ನನಗೆ ಗೊತ್ತಿಲ್ಲ. ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಲು ನಾನು ಅರ್ಜಿ ನೀಡಿದ್ದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂಬುದಾಗಿ ಪೇಪರ್ ಪಬ್ಲಿಕೇಷನ್ ಹೊರಟಿಸಿದ್ದೆ

ಎಂದರೆ ಸರಿ. ಕೇಸಿನಲ್ಲಿರುವ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪತ್ರಿಕೆ ಪ್ರಕಟಣೆ ಹೊರಡಿಸಿದ್ದೆವು. ಪ್ರಕಟಣೆ ಹೊರಡಿಸಲು ನ್ಯಾಯಾಲಯದ ಅನುಮತಿ ಪಡೆದಿರುವುದಿಲ್ಲ. 2 ನೇ ಎದುರುದಾರರ ಅರ್ಜಿ ಮೇರೆಗೆ ತಹಶೀಲ್ದಾರ್‌ರವರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿದ ವಿಚಾರ ಗೊತ್ತಿಲ್ಲ. ಪುರಸಭೆಯವರು ದಾಖಲೆಗಳು ತಾಳೆಯಾಗುತ್ತಿಲ್ಲ ಎಂದು ಅರ್ಜಿದಾರರಿಗೆ ನೋಟೀಸು ಕಳುಹಿಸಿರುತ್ತಾರೆಂದರೆ ಸರಿಯಲ್ಲ. ಸದರಿ ನೋಟೀಸು ಅರ್ಜಿದಾರರಿಗೆ ಜಾರಿಯಾದ ವಿಚಾರ ನನಗೆ ಗೊತ್ತಿಲ್ಲ. ರಿಜಿಸ್ಟರ್ ಪತ್ರದ ಆಧಾರದ ಮೇಲೆ ಅರ್ಜಿದಾರರ ಹೆಸರಿಗೆ ಖಾತೆ ಆಗಿರುತ್ತದೆ. ಸದರಿ ಪತ್ರಗಳನ್ನು ನ್ಯಾಯಾಲಯ ಓ.ಎಸ್. 25/94 ರಲ್ಲಿ ನ್ಯಾಯಾಲಯ ಪರಿಗಣಿಸಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಸದರಿ ದಾನ ಪತ್ರಗಳನ್ನು ಪ್ರಶ್ನೆ ಮಾಡಿ ಕಾಶಿ ವಿಶ್ವನಾಥ ಶೆಟ್ಟಿಯವರ ಮಕ್ಕಳು ಎಲ್ಲಿಯೂ ದಾವೆ ಮಾಡಿರುವುದಿಲ್ಲ.

2 ನೇ ಎದುರುದಾರರಿಗೆ ಆದ ಖಾತೆಯನ್ನು ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು ಆ ಪ್ರಕಾರ ಖಾತೆ ಆಗಿರುತ್ತದೆ. ನ್ಯಾಯಾಲಯದ ಆದೇಶವನ್ನು ಹೇಳದೇ ನಮ್ಮ ಪರವಾಗಿ ಆದೇಶ ಆಗಿರುವುದಾಗಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ರಿಟ್ ಅರ್ಜಿಯ ಆದೇಶದ ಪ್ರಕಾರ ಮೂಲ ಖಾತೆದಾರರ ಹೆಸರಿಗೆ ಖಾತೆ ಬದಲಾವಣೆ ಮಾಡಬೇಕೆಂದು ಇರುತ್ತದೆಂದರೆ ಸರಿಯಲ್ಲ. ಮೂಲ ಖಾತೆದಾರರು 1 ನೇ ಎದುರುದಾರರು ಎಂದರೆ ಸರಿಯಲ್ಲ. ಸದರಿ ಸಂಬಂಧ ತಹಶೀಲ್ದಾರರು ನನಗೆ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. 45 ಲಕ್ಷ ರೂ.ಗಳಿಗೆ ಅರ್ಜಿದಾರರು ಆದಾಯ ತೆರಿಗೆ ಪಾವತಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

2010 ನೇ ಸಾಲಿನಲ್ಲಿ 1 ನೇ ಎದುರುದಾರರು ಅರ್ಜಿದಾರರಿಗೆ ಮತ್ತೊಂದು ದಾನಪತ್ರ ಬರೆದುಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ಕೇಸಿಗಾಗಿ ದಾನಪತ್ರಗಳನ್ನು ಸೃಷ್ಟಿಸಿ ಹಾಜರುಪಡಿಸಲಾಗಿರುತ್ತದೆಂದರೆ ಸರಿಯಲ್ಲ. ಕಾಶಿವಿಶ್ವನಾಥ ಶೆಟ್ಟಿಯವರ ಕುಟುಂಬದ ವಿಚಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲದೇ ಇದ್ದರೂ ಸಹ ಆಸ್ತಿಗಳನ್ನು ಕಬಳಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನೊಂದಣಿ ವಿಭಾಗ ಪತ್ರದಲ್ಲಿ 3

ಜನ ಗಂಡು ಮಕ್ಕಳಿಗೆ ಸಮಾನಾಗಿ ಆಸ್ತಿ ಹೋಗಬೇಕು ಎಂದು ನಮೂದು ಮಾಡಿರುತ್ತಾರೆಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರವಾಗಿ ಶ್ರೀ ಪಿ.ಎನ್. ವಕೀಲರಿಂದಃ-**

ಓ.ಎಸ್.25/1994 ರ ದಾವೆಯ ಡಿಕ್ರಿಯ ವಿರುದ್ಧ ಯಾರು ಅಪೀಲು ಮಾಡಿರುವುದಿಲ್ಲ ಎಂದರೆ ಸರಿ. ಡಿಕ್ರಿಯ ಪ್ರಕಾರ 3 ನೇ ಎದುರುದಾರರಿಗೆ ಹಿಸ್ಸೆ ಬಂದಿರುತ್ತದೆಂದರೆ ಸರಿಯಲ್ಲ. 3 ನೇ ಎದುರುದಾರರ ಹಿಸ್ಸೆಗೆ ಬಂದ ಆಸ್ತಿಗಳ ಸಾಧೀನ ಅವರ ಬಳಿಯಲ್ಲಿದೆ. 3 ನೇ ಎದುರುದಾರರ ಹಿಸ್ಸೆಗೆ ಬಂದ ಆಸ್ತಿಗಳನ್ನು ಹೊರತುಪಡಿಸಿ ಈ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ. 3 ನೇ ಎದುರುದಾರರಿಗೆ ಹಿಸ್ಸೆಯ ಆಸ್ತಿಯು ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮೂಲ ದಾವಾ 25/1994 ರಲ್ಲಿ ದಾನ ಪತ್ರಗಳ ಬಗ್ಗೆ ನ್ಯಾಯಾಲಯ ಹೇಳಿರುವ ವಿಚಾರಗಳ ಬಗ್ಗೆ ಗೊತ್ತಿಲ್ಲ. 3ನೇ ಎದುರುದಾರರಿಗೆ ಹಿಸ್ಸೆ ಪ್ರಕಾರ ಆಸ್ತಿ ಬರದೇ ಇದ್ದರೂ ಸಹ ಆಸ್ತಿ ಕೊಡಬೇಕಾಗುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**(ಇ.ಚಂದ್ರಕಲಾ)**

ಹಿರಿಯ ಸಿವಿಲ್ ಜಡ್ಜ್ ಮತ್ತು ಎಂಎಸಿಟಿ

ಅರಸೀಕೆರೆ, ದಿಃ4-04-2016